SRI M.C. NANAIAH:- The Minister who is in charge, should pilot the Bill. I think, this lapse will not occur.

MR.SPEAKER:- It is condoned.

4. 1995ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, 1995ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ; 1995ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ 1995ನೇ ಸಾಲಿನ ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ. ಈಗ ಸಭೆಯನ್ನು ಒಂದು ಗಂಟೆ ಕಾಲ ಮುಂದೂಡಿದ್ದೇನೆ.

(ಸದನವು 1 ಗಂಟೆ 45 ನಿಮಿಷಕ್ಕೆ ಒಂದು ಗಂಟೆ ವಿರಾಮಕ್ಕಾಗಿ ಮುಂದೂಡಲ್ಪಟ್ಟಿತು)

(ಮತ್ತೆ ಸಭೆಯು ಮಧ್ಯಾಹ್ನ 3.00 ಘಂಟೆಗೆ ಸಮಾವೇಶಗೊಂಡಿತು ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

+ಡಾ॥ ಯು.ಚಿತ್ತರಂಜನ್:- ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ಡಿಮಾಂಡ್ ಮೇಲಿನ ನನ್ನ ಮಾತನ್ನು ಮುಂದುವರಿಸಲಿಚ್ಛಿಸುತ್ತೇನೆ. ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಂದುವರೆಸುತ್ತಿದ್ದೇನೆ. ನಿನ್ನೆ ನಾನು ನಾಲ್ಕು ನಿಮಿಷಗಳು ಇದರ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಅತ್ಯಂತ ಪ್ರಾಮುಖ್ಯವಾದಂತಹ 3-4-ವಿಷಯಗಳ ಬಗ್ಗೆ ಸಭೆಯ ಗಮನವನ್ನು ಸೆಳೆದಿದ್ದೆ. ಇದು ಶಾಸಕರು ಮಾಡುವಂತಹ ಅತ್ಯಂತ ಪವಿತ್ರವಾದ ಕರ್ತವ್ಯವೆಂದು ತಿಳಿದಿದ್ದೇನೆ. ಎರಡನೆಯದು ಈ ಅಭಿಯಾಚನೆ ಏನಿದೆ ಇದನ್ನು ಮಂಡಿಸುವಂತಹ ಸಂದರ್ಭದಲ್ಲಿ ಕುಂಬಾ ಚಿಂತನೆ ಮಾಡಿ, ಆಲೋಚನೆ ಮಾಡಿ ಮಂಡಿಸಬೇಕೆಂದು ಹೇಳಿ. ಮೂರನೆಯದು ಇದನ್ನು ಸಂಬಂಧಪಟ್ಟಂತಹ ಮಂತ್ರಿಗಳು ಯಾರಿದ್ದಾರೆ, ಅವರು ಇದನ್ನು ಸ್ವತ: ಅಭ್ಯಾಸ ಮಾಡಿ ಒಂದು ದೃಷ್ಟಿಕೋನವನ್ನಿಟ್ಟುಕೊಂಡು ಮಂಡಿಸಬೇಕು. They should have a vision. ಎನ್ನುವಂತಹ ವಿಚಾರವಾಗಿದೆ. ಕೊನೆಯದಾಗಿ ಯಾವುದು all said and done it should reach the people. ಜನ ಹಿತವಾಗುವಂತಹ ನಮ್ಮ ಡಿಮಾಂಡ್ಸ್ ಇರಬೇಕು ಎನ್ನುವಂಥಾದ್ದರ ಬಗ್ಗೆ